**ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ಮತ್ತು 3 ನೇ ಪ್ರತಿವಾದಿಗಳ ಪರವಾಗಿ ಶ್ರೀ. ಹೆಚ್.ಎಮ್.ಎ. ವಕೀಲರಿಂದಃ**

ನಿಪಿ.15ರ ಛಾಪಾ ಕಾಗದದ ರಶೀದಿ ದಿನಾಂಕ 19.07.2016 ಆಗಿರುತ್ತದೆ ಎಂದರೆ ಸರಿ. ಆದೇ ರೀತಿ ನಿಪಿ.15ರ ಛಾಪಾ ಕಾಗದದ ವಿತರಣಾ ದಿನಾಂಕ 19.05.2016 ಆಗಿರುತ್ತದೆ ಎಂದರೆ ಸರಿ. ನಿಪಿ.15ರಲ್ಲಿ ವಿತರಿಸಿದ ಛಾಪಾ ಕಾಗದದ ಕ್ರಮ ಸಂಖ್ಯೆ. 145/2016-17 ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಛಾಪಾ ಕಾಗದವನ್ನು ಯಾವ ಕಾರಣಕ್ಕಾಗಿ ಖರೀದಿಸಲಾಗಿದೆ ಎಂದು ಅದರಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ. 2ನೇ ಪುಟದಲ್ಲಿ ಸಬ್ ರಿಜಿಸ್ಟರ್ ರವರ ಸಹಿ ಇರುವುದಿಲ್ಲ ಮತ್ತು ಸದರಿ ಪುಟದಲ್ಲಿ ಸೀಲ್ ನ್ನು ಹೊಡೆದುಹಾಕಿರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ಯಾವುದಕ್ಕೆ ಹೊಡೆದುಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಪಿ.15ರ ಛಾಪಾ ಕಾಗದವನ್ನು ತಯಾರು ಮಾಡಿರುವ ವಕೀಲರು ಮತ್ತು ನೋಟರಿ ಮಾಡುವವರ ವಕೀಲರು ಒಬ್ಬರೇ ಆಗಿರುತ್ತಾರೆ. ಸದರಿ ತಯಾರು ಮಾಡಿರುವ ವಕೀಲರನ್ನು ಈ ದಾವೆಯಲ್ಲಿ ಸಾಕ್ಷಿದಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಿಪಿ.15ರಲ್ಲಿ ಏನು ಶರತ್ತು ಬರೆದಿದೆ ಎಂದು ನಾನು 2020ರಲ್ಲಿ ತಿಳಿದುಕೊಂಡಿರುತ್ತೇನೆ. 2016ರಲ್ಲಿ ದಾವಾ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿ ಇದೆ ಎಂದು ತಿಳಿದುಕೊಂಡಿರುತ್ತೇನೆ. ಯಾವ ದಾಖಲೆಯನ್ನು ನೋಡಿ ತಿಳಿದುಕೊಂಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯಿತಿಯ ಆಧಾರದ ಮೇಲೆ 2016ರಲ್ಲಿ ಸ್ವತ್ತುಗಳು ನೊಂದಾವಣೆ ಆಗುತ್ತಿತ್ತು ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬ್ಯಾಂಕ್ ಸ್ಟೇಟ್ ಮೆಂಟ್ ಬಗ್ಗೆ ನಾನು ತಿಳಿದುಕೊಂಡು ಹಾಜರು ಪಡಿಸಿರುತ್ತೇನೆ.

ದಿಃ 19.07.2016ರಂದು ಎನ್ ಇ ಎಫ್ ಯುಟಿ ಆರ್ ನಂಬರ್ ನಂತೆ ರೂ.73,000/- ಮೊತ್ತ ಬೇರೆಯವರಿಗೆ ವರ್ಗಾವಣೆಯಾಗಿದೆ ಎಂದು ನಿಪಿ.16ರಲ್ಲಿ ನಮೂದಾಗಿರುತ್ತದೆ ಎಂದರೆ ಸುಳ್ಳು, ನಾನೇ ಬ್ಯಾಂಕಿನಿಂದ ಡ್ರಾ ಮಾಡಿ ರೂ.75,000/- ಹಣವನ್ನು ಮಹೇಶ್ ರವರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನದಂದು ಹಣ ಡ್ರಾ ಮಾಡಿರುವ ಬಗ್ಗೆ ನಿಪಿ.16ರಲ್ಲಿ ನಮೂದಾಗಿರುವುದಿಲ್ಲ ಎಂದರೆ

ಸರಿಯಲ್ಲ. ಈ ದಾವೆಯನ್ನು ಹೂಡುವ ಮುನ್ನ ನೋಟಿಸ್ ಕೊಡುವ ಸಮಯದಲ್ಲಿ ಪ್ರತಿವಾದಿಗಳು ಎಲ್ಲೆಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ತಿಳಿದಿತ್ತು. ನಿಪಿ.3 ರಲ್ಲಿ ಎಲ್ಲಾ ಪ್ರತಿವಾದಿಗಳ ವಿಳಾಸವನ್ನು ಗುಲ್ಲಹಳ್ಳಿ ಗ್ರಾಮ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ನೋಟಿಸ್ ಕೊಡುವ ಸಮಯದಲ್ಲಿ ಮಮತಾ ಮತ್ತು ಮಂಜುಳಾ ರವರು ಆ ವಿಳಾಸದಲ್ಲಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ಆ ಸಮಯದಲ್ಲಿ ಅವರು ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಮಮತಾ ಮತ್ತು ಮಂಜುಳಾ ರವರ ಮದುವೆ 2016 ರ ಪೂರ್ವದಲ್ಲೇ ಆಗಿತ್ತು ಎಂದರೆ ಗೊತ್ತಿಲ್ಲ.

ನಿಪಿ.3 ಮತ್ತು 8 ಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಯಾವ ವಕೀಲರಿಗೆ ಮಾಹಿತಿ ನೀಡಿರುತ್ತೇನೆ ಎಂದು ನನಗೆ ತಿಳಿದಿಲ್ಲ. ನಿಪಿ.3 ಎಲ್ಲಾ ಪ್ರತಿವಾದಿಗಳಿಗೂ ಜಾರಿಯಾಗಿರುತ್ತದೆ. 2 ನೇ ನೋಟಿಸಾದ ನಿಪಿ.8 ನ್ನು ಯಾವ ಕಾರಣಕ್ಕಾಗಿ ನೀಡಿರುತ್ತೀರಾ ಎಂದರೆ ಪ್ರತಿವಾದಿಗಳು ಸ್ಪಂದಿಸದ ಕಾರಣ ಮರು ನೋಟಿಸನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.8 ಕೂಡ ಎಲ್ಲಾ ಪ್ರತಿವಾದಿಗಳಿಗೂ ಜಾರಿಯಾಗಿರುತ್ತದೆ. ನೋಟಿಸು ಜಾರಿಯಾಗಿ ಬಂದ ನಂತರ ನಿಪಿ.15 ನ್ನು ತಯಾರು ಮಾಡಿರುತ್ತೀರಾ ಎಂದರೆ ನೆನಪಿಲ್ಲ. ನಿಪಿ.15 ರಲ್ಲಿರುವ ಸಹಿಗಳು ಪ್ರತಿವಾದಿಗಳದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ.3 ಮತ್ತು 8 ರ ನೋಟಿಸ್ ಜಾರಿಯಾದ ನಂತರ ಸದರಿ ಸ್ವೀಕೃತಿಗಳ ಆಧಾರದ ಮೇಲೆ ನಿಪಿ.15 ರಲ್ಲಿ ಪ್ರತಿವಾದಿಗಳ ಸಹಿಗಳನ್ನು ಸೃಷ್ಟಿಸಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ನಿಪಿ.15 ನ್ನು ತಯಾರಿಸುವ ಸಮಯದಲ್ಲಿ ದಾವಾ ಸ್ವತ್ತಿನ ಯಾವುದೇ ದಾಖಲಾತಿಗಳನ್ನು ಪಡೆದಿಲ್ಲ ಎಂದರೆ ನೆನಪಿಲ್ಲ.

ಸಾಮಾನ್ಯವಾಗಿ ಯಾವುದೇ ಕರಾರು ಮಾಡುವ ಸಂದರ್ಭದಲ್ಲಿ ಸ್ವತ್ತಿನ ದಾಖಲಾತಿಗಳನ್ನು ಪಡೆಯುತ್ತಾರೆ ಎಂದರೆ ಸರಿ. ಆ ರೀತಿ ಯಾವುದೇ ಕರಾರು ಪತ್ರ ಆಗದ ಕಾರಣ ನೀವು ಸ್ವತ್ತಿನ ಯಾವುದೇ ದಾಖಲಾತಿಗಳನ್ನು ಪಡದಿರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರದ ಸ್ವತ್ತಿನ ಸಂಖ್ಯೆ.229 ಆಗಿರುತ್ತದೆ. ಕರಾರು ಆದ ಸಮಯದಲ್ಲಿ ಸ್ವತ್ತಿನ ಸಂಖ್ಯೆ.229 ರ ಖಾತೆ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿರುತ್ತೇನೆ. ನ್ಯಾಯಾಲಯದ ಕಡತದಲ್ಲಿರುವ ದಾಖಲೆಗಳನ್ನು ಸಾಕ್ಷಿಗೆ ತೋರಿಸಿ ಇದರಲ್ಲಿ ಯಾವ ದಾಖಲೆ ಸ್ವತ್ತಿನ ಸಂಖ್ಯೆ.229 ರ ಖಾತೆಯ ದಾಖಲೆ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

ಮೊದಲನೇ ನೋಟಿಸ್ ಕೊಡುವ ಸಮಯದಲ್ಲಿ ನನ್ನ ಬ್ಯಾಂಕಿನ ಖಾತೆಯಲ್ಲಿ ಕೇವಲ ರೂ.27,000/- ಇತ್ತು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಎರಡನೇ ನೋಟಿಸ್ ಕೊಡುವ ಸಮಯದಲ್ಲಿ ನನ್ನ ಬ್ಯಾಂಕಿನ

ಖಾತೆಯಲ್ಲಿ ಕೇವಲ ರೂ.7,400/- ಇತ್ತು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಈ ದಾವೆಯನ್ನು ಹೂಡುವ ಸಮಯದಲ್ಲಿ ನನ್ನ ಖಾತೆಯಲ್ಲಿ ರೂ.7,900/- ಇದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನೋಟಿಸ್ ಕೊಡುವ ಸಮಯದಲ್ಲಿ ಮತ್ತು ದಾವೆಯನ್ನು ಹೂಡುವ ಸಮಯದಲ್ಲಿ ನನ್ನ ಹತ್ತಿರ ಉಳಿಕೆ ಕ್ರಯದ ಮೊಬಗಲು ರೂ.1,10,000/- ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನನ್ನ ಬಳಿ ಅಷ್ಟು ದುಡ್ಡು ಇರಲಿಲ್ಲ ಎಂದು ನುಡಿಯುತ್ತಾರೆ.

2003 ರಿಂದ 2016 ರವರೆಗೆ ದೊಡ್ಡನಗೆರೆ ಗ್ರಾಮ ಪಂಚಾಯಿತಿಯಲ್ಲಿ ನಾನು ಸದಸ್ಯಳಾಗಿರುತ್ತೇನೆ. ಆ ಕಾರಣಕ್ಕಾಗಿ ದಾಖಲೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ದಾಖಲೆಗಳ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ, ಈ ದಾವೆಯಲ್ಲಿ ಯಾವುದೇ ಕರಾರು ಆಗಿರುವುದಿಲ್ಲ, ಆದ್ದರಿಂದ ನಾನು ದಾವಾ ಸ್ವತ್ತಿನ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ ಪ್ರತಿವಾದಿಗಳಿಗೆ ಯಾವುದೇ ಹಣ ಸಂದಾಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.15 ನ್ನು ನಾನು ಮತ್ತು ಅದರಲ್ಲಿರುವ ಸಾಕ್ಷಿದಾರರು ಸೇರಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಣ ಕೊಟ್ಟಿದ್ದೇ ಆಗಿದ್ದರೇ ನಿಪಿ.15 ನ್ನು ನೊಂದಾವಣಿ ಮಾಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಇ-ಖಾತೆ ಆಗಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಮೊದಲನೇ ಮತ್ತು ಎರಡನೇ ನೋಟಿಸನ್ನು ನಿಪಿ.15 ರ ಶರತ್ತಿನ ಕಾಲಾವಕಾಶ ಮುಗಿದುಹೋಗಿರುತ್ತದೆ ಎಂದು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.15 ನ್ನು ಪ್ರತಿವಾದಿಗಳು ಮಾಡಿಕೊಳ್ಳದ ಕಾರಣ ನನಗೆ ಕ್ರಯಪತ್ರ ಮಾಡಿಕೊಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸಕೋಟೆ